**ದಿನಾಂಕ 04.07.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ– ಶ್ರೀಮತಿ ಸಿ.ಆರ್.ಎನ್. ಪ್ರತಿವಾದಿ 1, 9 ಮತ್ತು 10 ರವರ ಪರ ವಕೀಲರಿಂದಃ**

ವಾದಿ ಮಂಜುನಾಥಶೆಟ್ಟಿ ನನ್ನ ಸೋದರ ಮಾವ. ನಮಗೆ ಸುಮಾರು 2 ಎಕರೆ ಜಮೀನು ಇದೆ. ನಮ್ಮ ಜಮೀನು ಶ್ರೀನಿವಾಸ ಕ್ಲಿನಿಕ್ ಮುಖಾಂತರ ಹೋದರೆ ಪದ್ಮಾಕ್ಷ ಕ್ಲಿನಿಕ್ ನ ನಂತರ ಸಿಗುತ್ತದೆ. ನಮ್ಮ ಜಮೀನಿನ ಪೂರ್ವಕ್ಕೆ ವಿಜಯಲಕ್ಷ್ಮೀ ರೈಸ್ ಮಿಲ್, ಪಶ್ಚಿಮ ಮತ್ತು ದಕ್ಷಿಣಕ್ಕೆ ವಾದಿ ರವರ ಜಾಗ, ಉತ್ತರಕ್ಕೆ ಈ ಹಿಂದೆ ಐಯಾವು ರವರ ಮಾಲೀಕತ್ವದಲ್ಲಿದ್ದ ಸತೀಶ್ ಎನ್ನುವವರ ಜಾಗ ಇರುತ್ತದೆ. ಸದರಿ ಜಾಗಗಳು ಕೃಷಿ ಭೂಮಿ ಆಗಿರುತ್ತದೆ ಎಂದರೆ ಸಾಕ್ಷಿಯು ಸುಮಾರು 1978–80 ರಲ್ಲೇ ಸದರಿ ಭೂಮಿಗಳು ಕೃಷಿಯೇತರ ಉದ್ದೇಶಕ್ಕೆ ಪರಿವರ್ತನೆ ಆಗಿರುತ್ತದೆ. ನಮ್ಮ ಜಮೀನಿನಲ್ಲಿ ನಾವು 20 ಸೈಟುಗಳನ್ನು ರೂಪಿಸಿದ್ದು ಅವುಗಳ ಪೈಕಿ ಕೆಲವು ಇನ್ನೂ ಮಾರಾಟವಾಗದೇ ಇರುತ್ತದೆ. ಮಾರಾಟವಾದ ಹಲವು ಸೈಟುಗಳಲ್ಲಿ ಮನೆಗಳನ್ನು ನಿರ್ಮಿಸಿರುತ್ತಾರೆ. ಈಗ ನಿಮ್ಮ ಜಮೀನಿನಲ್ಲಿರುವ ಸೈಟಿನ ಮಾಲೀಕರು ಯಾವ ರಸ್ತೆಯ ಮೂಲಕ ಓಡಾಡುತ್ತಾರೆ ಎಂದರೆ ಬಸ್ತೀಪುರ ಮುಖ್ಯರಸ್ತೆಯನ್ನು ಬಳಸಿ ಓಡಾಡುತ್ತಾರೆ ಆದರೆ ನಮ್ಮ ಜಾಗದಿಂದ ಬಸ್ತೀಪುರ ಮುಖ್ಯರಸ್ತೆಗೆ ಸಂಪರ್ಕ ರಸ್ತೆಯನ್ನು ಪ್ರತಿವಾದಿ 1 ರವರು ಅಡ್ಡಗಟ್ಟಿರುವ ಕಾರಣ ಅಲ್ಲಿ ನೆಲೆಸಿರುವ ಜನಗಳಿಗೆ ತೊಂದರೆ ಆಗುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿ 1 ರವರ ಜಮೀನಿನ ಪೂರ್ವಕ್ಕೆ ನಮ್ಮ ಜಮೀನು ಇರುತ್ತದೆ. ನಮ್ಮ ಜಮೀನಿಗೆ ಹಾಗೂ ಪ್ರತಿವಾದಿ 1 ರವರ ಜಮೀನಿನ ಉತ್ತರಕ್ಕೆ ಬಸ್ ನಿಲ್ದಾಣ ಇರುತ್ತದೆ. ನಿಮ್ಮ ಜಮೀನಿನಿಂದ ಅಲ್ಲಿ ನೆಲೆಸಿರುವ ನಿವಾಸಿಗಳು ದಕ್ಷಿಣದ ದಿಕ್ಕಿನಲ್ಲಿರುವ ಬಸ್ತೀಪುರಕ್ಕೆ ಹೋಗುವ ಸಂದರ್ಭವೇ ಇಲ್ಲದಿದ್ದರೂ ಪ್ರತಿವಾದಿ 1 ರವರು ಸದರಿ ನಿವಾಸಿಗಳಿಗೆ ಯಾವುದೇ ತೊಂದರೆ ನೀಡದಿದ್ದರೂ ನೀವು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಟೌನಿನ ನೀಲಿ ನಕ್ಷೆಯಲ್ಲಿ ರಸ್ತೆ ಎಂದು ನಮೂದಿಸಿಲ್ಲ ಎಂದರೆ ಸರಿಯಲ್ಲ. ನೀವು ಲೇಔಟ್ ರೂಪಿಸುವ ಸಂದರ್ಭಕ್ಕೆ ಸರಿಯಾಗಿ ಸಂಪರ್ಕ ರಸ್ತೆಗಳನ್ನು ಇಟ್ಟುಕೊಳ್ಳದ ಕಾರಣ 1ನೇ ಪ್ರತಿವಾದಿಯವರು ಯಾವುದೇ ತೊಂದರೆ ನೀಡದಿದ್ದರೂ ಅಕ್ರಮವಾಗಿ ಸಂಪರ್ಕ ರಸ್ತೆ ಪಡೆಯುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ–10 ರಲ್ಲಿರುವ ನಕ್ಷೆ ವಾದಿರವರು ಅಕ್ರಮವಾಗಿ ಮಾಡಿಕೊಂಡಿರುವ ರಸ್ತೆ ಎಂದರೆ ಸರಿಯಲ್ಲ. ವಾದಿರವರ ನಿವೇಶನಗಳು ಸ್ಮಶಾನದ ಹತ್ತಿರ ಇರುವ ಕಾರಣ ಮಾರಾಟವಾಗಿಲ್ಲ ಎಂದರೆ ನನಗೆ ಮಾಹಿತಿ ಇಲ್ಲ. ವಾದಿರವರು ನಮ್ಮ ಸೋದರ ಮಾವ ಆಗಿರುವುದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದ ಪ್ರತಿವಾದಿ 1 ರವರ ಅಡಚಣೆಯಿಂದ ನಮಗೂ ಓಡಾಡಲು ತೊಂದರೆ ಆಗಿರುವುದರಿಂದ ನಾನು ಸಾಕ್ಷಿ ನುಡಿಯುತ್ತಿದ್ದೇನೆ.

**ಪಾಟೀ ಸವಾಲುಃ– ಶ್ರೀ ಎಂ.ಪಿ. 7ನೇ ಪ್ರತಿವಾದಿ ಪರ ವಕೀಲರಿಂದಃ**

ವಾದಿಗಳು 'ಎ' ಷೆಡ್ಯೂಲ್ ಸ್ವತ್ತಿಗೆ ತಾವು ಮಾಲೀಕರು ಎಂದು ಘೋಷಣೆ ಮಾಡುವಂತೆ ಪರಿಹಾರವನ್ನು ಕೇಳಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ವಾದಿಗಳಿಗೆ ಷೆಡ್ಯೂಲ್ ಸ್ವತ್ತು ಪಿತ್ರಾರ್ಜಿತವಾಗಿ ಬಂದಿರುತ್ತದೆ. ವಾದಿಗಳ ಸ್ವತ್ತು ಸರ್ವೆ ನಂಬರ್ 727 ರಲ್ಲಿರುತ್ತದೆ. ವಾದಿಗಳ ಸ್ವತ್ತಿನ ಪೂರ್ವಕ್ಕೆ ನಮ್ಮ ಜಮೀನು, ಪಶ್ಚಿಮಕ್ಕೆ ಕೊಂಗಣಗೆರೆ ಕೆರೆ, ಉತ್ತರಕ್ಕೆ ಬಸ್ ನಿಲ್ದಾಣ ಇರುತ್ತದೆ ಹಾಗೂ ದಕ್ಷಿಣಕ್ಕೆ ಯಾವ ಜಮೀನು ಇರುತ್ತದೆ ಎಂದು ಮಾಹಿತಿ ಇಲ್ಲ.

ವಾದಿಗಳ ಸ್ವತ್ತಿನ ಭೂ ಪರಿವರ್ತನೆ ಹಾಗೂ ಅವರು ರೂಪಿಸಿರುವ ಲೇಔಟ್ ನ ಮಾಹಿತಿ ನನಗೆ ಇಲ್ಲ. ಲೇಔಟ್ ರೂಪಿಸುವುದಕ್ಕೆ ನಗರ ಪ್ರಾಧಿಕಾರದಿಂದ ಅನುಮೋದನೆ ಪಡೆಯಬೇಕಾಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಇರುವ ಮಾಹಿತಿಯ ಪ್ರಕಾರ ವಾದಿ ಮತ್ತು ನಾವುಗಳು ಲೇಔಟ್ ರೂಪಿಸುವ ಸಂದರ್ಭಕ್ಕೆ ಕೊಳ್ಳೇಗಾಲ ಟೌನ್ ನ ಪರಿಮಿತಿಗೆ ನಗರ ಪ್ರಾಧಿಕಾರದಿಂದ ಅನುಮೋದನೆ ಪಡೆಯುವ ಅವಶ್ಯಕತೆ ಇರಲಿಲ್ಲ. ನಿಪಿ-10ರ ನಕ್ಷೆಯಲ್ಲಿ ಅನುಮೋದನೆಯ ದಿನಾಂಕ ಕಾಣುತ್ತಿಲ್ಲ. ಕೊಳ್ಳೇಗಾಲ ಟೌನ್ ರೂಪವಾದ ಸಮಯದಿಂದಲೂ ಕೊಳ್ಳೇಗಾಲ ಟೌನ್ ಗೆ ನೀಲಿ ನಕ್ಷೆ ಇದೆ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ವಾದಿ ಮತ್ತು ನಿಮ್ಮ ಆಸ್ತಿಗಳು ಕೃಷಿ ಭೂಮಿಗಳಾಗಿದ್ದು, ಸದರಿ ಜಮೀನುಗಳಲ್ಲಿ ಯಾವುದೇ ರಸ್ತೆ ಇಲ್ಲ ಎಂದರೆ ಸರಿಯಲ್ಲ. ವಾದಿಯವರ ಜಮೀನು ಕೃಷಿಯೇತರ ಉದ್ದೇಶಕ್ಕೆ ಪರಿವರ್ತನೆ ಆದ ಸಂದರ್ಭದಲ್ಲಿ ತಯಾರಿಸಿರುವ ನಕ್ಷೆಯನ್ನು ವಾದಿಗಳು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ನನಗೆ ಮಾಹಿತಿ ಇಲ್ಲ. ವಾದಿಗಳು ಈ ದಾವೆಯಲ್ಲಿ ತಿಳಿಸಿರುವಂತೆ ರಸ್ತೆ ಅಸ್ತಿತ್ವದಲ್ಲಿರುವ ಬಗ್ಗೆ ನೀವು ಪುರಸಭೆಯ ದಾಖಲೆಯನ್ನು ನೋಡಿರುತ್ತೀರಾ ಎಂದರೆ ಸಾಕ್ಷಿಯು ನನಗೆ ಪುರಸಭೆಯ ದಾಖಲೆಗಳನ್ನು ನೋಡುವ ಅವಕಾಶ ಇರಲಿಲ್ಲ ಎಂದು ನುಡಿಯುತ್ತಾರೆ. ವಾದಿ ಪರ ನ್ಯಾಯಾಲಯದಿಂದ ಆದೇಶವಾದಲ್ಲಿ ನನಗೂ ಅನುಕೂಲವಾಗುತ್ತದೆ ಎಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳು ಸಲ್ಲಿಸಿರುವ ನಿಪಿ-10ರ ನಕ್ಷೆಯು ಯಾವುದೇ ಪ್ರಾಧಿಕಾರದಿಂದ ಅನುಮೋದನೆ ಆಗದೇ ವಾದಿಗಳು ಇಂಜಿನಿಯರ್ ಗಳ ಮುಖಾಂತರ ಅಕ್ರಮವಾಗಿ ಸೃಷ್ಟಿಸಿಕೊಂಡಿರುವ ದಾಖಲೆ ಎಂದರೆ ಸರಿಯಲ್ಲ. ಪ್ರಸ್ತುತ ಯಾವುದೇ ದಾರಿ ಅಸ್ತಿತ್ವರದಲ್ಲಿ ಇಲ್ಲದೇ ಇದ್ದರೂ ವಾದಿ ಸ್ವಂತ ಸಂಬಂಧಿಯಾದ ಕಾರಣದಿಂದ ಅವರಿಗೆ ಅನುಕೂಲ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿವಾದಿ 2 ರಿಂದ 6 ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕೊಳ್ಳೇಗಾಲ